ದಿಃ 28.08.2024 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.

**ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ ವಿ.ವಿ ವಕೀಲರಿಂದ ,**

1. ನಾನು ಈ ದಾವೆಯನ್ನು ನನ್ನ ತಾಯಿಯ ಆಸ್ತಿಯಲ್ಲಿ ಪಾಲು ಬೇಕೆಂದು ಕೇಳಿರುತ್ತೇನೆ. ಈಗ ನನಗೆ 48 ವರ್ಷ ವಯಸ್ಸು. ನನ್ನ ತಂದೆಗೆ ಪಿತ್ರಾರ್ಜಿತವಾಗಿ ಯಾವುದೇ ಆಸ್ತಿ ಬಂದಿರುವುದಿಲ್ಲ ನನ್ನ ತಂದೆಯೇ ಖರೀದಿ ಮಾಡಿರುತ್ತಾರೆ. ನನ್ನ ತಂದೆಯೇ ನಾಗರತ್ನರವರಿಗೆ ಮದುವೆ ಮಾಡಿ ಕಳುಹಿಸಿರುತ್ತಾರೆ ಎಂದರೆ ಸರಿ. ದಾವಸ್ವತ್ತಿಗಳಲಿ ನನ್ನ ತಾಯಿಗೂ ಹಿಸ್ಸೆ ಬರಬೇಕೆಂದು ಹೇಳಿ ಈ ದಾವೆಯನ್ನು ಮಾಡಿದ್ದೇನೆ ಎಂದರೆ ಸರಿ. ಈ ದಾವೆಯನ್ನು ನಾನೇ ಹೇಳಿ ಬರೆಸಿ ಹಾಕಿಸಿರುತೇನೆ ಕೃಷ್ಣೇಗೌಡರ ಹೆಂಡತಿ ರತ್ನರವರನ್ನು ಈ ಕೇಸಿನಲ್ಲಿ ಪಾರ್ಟಿ ಮಾಡಿಲ್ಲ ಎಂದರೆ ಸರಿ. ಈ ದಾವೆ ಮಾಡುವ ಸಮಯದಲ್ಲಿ 05 ನೇ ಪ್ರತಿವಾದಿಯ ಹೆಸರಿನಲ್ಲಿ ಎಲ್ಲಾ ಆಸ್ತಿಗಳು ಇದ್ದವು. ನನ್ನ ತಾಯಿಯ ಹೆಸರಿನಲ್ಲಿರುವ ದಾಖಲೆಗಳನ್ನು ನಾನು ನ್ಯಾಯಾಲಯಕ್ಕೆ ಹಾಜರು ಪಡಿಸಿರುತ್ತೇನೆ. ದಾವಾಸ್ವತ್ತುಗಳಲ್ಲಿ ನನಗೆ ಎಷ್ಟು ಹಿಸ್ಸೆ ಬರಬೇಕೆಂದು ಈ ದಾವೆಯಲ್ಲಿ ಕೇಳಿರುವುದಿಲ್ಲ ಎಂದರೆ ಸರಿ. ಈ ದಾವೆಯಲ್ಲಿರುವ 01 ರಿಂದ 04 ಆಸ್ತಿಗಳು ನನ್ನ ತಾಯಿಯ ಹೆಸರಿನಲ್ಲಿರುತ್ತದೆ. ನಾನು ಹೇಳಿದ ಹಾಗೆ ಈ ದಾವೆಯಲ್ಲಿರುವ 01 ರಿಂದ 04 ಆಸ್ತಿಗಳು ನನ್ನ ತಾಯಿಯ ಹೆಸರಿನಲ್ಲಿ ಇರುತ್ತವೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ದಾಖಲೆಗಳನ್ನು ನೋಡಿ ಅದನ್ನು ಪರಿಶೀಲನೆ ಮಾಡಿ ಆ ನತಂರ ಈ ದಾವೆಯನ್ನು ಮಾಡಿರುತ್ತೇನೆ.

2. ನನ್ನ ಮದುವೆ 1993-94 ರಲ್ಲಿ ಆಗಿರುತ್ತದೆ. ನನ್ನ ಮದುವೆ ಮಾಡುವ ಸಮಯದಲ್ಲಿ ನನ್ನ ತಂದೆ ಜೀವಂತ ಇರಲಿಲ್ಲ ಎಂದರೆ ಸರಿ. ನನ್ನ ತಂದೆ ಮೃತಪಟ್ಟ ನಂತರ ನನ್ನ ತಾಯಿಯ ಹೆಸರಿಗೆ ಪೌತಿ ಖಾತೆಯ ಮೂಖಾಂತರ ಬಂದಿರುತ್ತದೆ. ದಿಃ 03-08-1993 ರಲ್ಲಿ ನನ್ನ ಮದುವೆಗಾಗಿ

ಸರ್ವೆ ನಂ. 11 ರಲ್ಲಿ 2 ಎಕರೆ 16 ಗುಂಟೆ ಜಮೀನಿನ ಪೈಕಿ 20 ಗುಂಟೆ ಜಮೀನನ್ನು ಪುಟ್ಟ ಬೋರಮ್ಮರವರಿಗೆ ರೂ.26,500/- ಗಳಿಗೆ ಮಾರಾಟ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಈ ವಿಚಾರವನ್ನು ನನ್ನ ತಾಯಿ ನನಗೆ ಹೇಳಿದ್ದರೂ ಸಹ ಇಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ದಾವೆಯಲ್ಲಿ ಈ ಆಸ್ತಿಯನ್ನು ಮಾರಾಟ ಮಾಡಿರುವ ವಿಚಾರವನ್ನು ಹೇಳಿರುವುದಿಲ್ಲ ಎಂದರೆ ಸರಿ. ನನ್ನ ಮದುವೆಗಾಗಿ 20 ಗುಂಟೆ ಜಮೀನನ್ನು ನನ್ನ ತಾಯಿ ಮತ್ತು ಉಳಿದವರು ಮಾರಾಟ ಮಾಡಿದ್ದ ವಿಚಾರ ನನಗೆ ಗೊತ್ತಿದ್ದರು ಸಹ ಇಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ತಾಯಿ ಮದುವೆಗಾಗಿ ಈ ಆಸ್ತಿಯನ್ನು ಮಾರಾಟ ಮಾಡಿರುತ್ತಾರೆ ಎಂದರೆ ಸರಿಯಲ್ಲ. ನಾನು ಸುಮಾರು 10 ವರ್ಷಗಳ ಹಿಂದೆ ದಾವಸ್ವತ್ತುಗಳಲ್ಲಿ ಭಾಗಬೇಕೆಂದು ನನ್ನ ತಾಯಿಯ ಬಳಿ ಕೇಳಿರುತ್ತೇನೆ. ನಾನು ಭಾಗ ಬೇಕೆಂದು ಕೇಳಿದಾಗ ಆಸ್ತಿಗಳೇಲ್ಲವೂ ನನ್ನ ತಾಯಿಯ ಹೆಸರಿನಲಿತ್ತು.

**ಮುಂದುವರಿಂದ ಪಾಟೀ ಸವಾಲಿಗೆ ಸಮಯ ಕೋರಿದ್ದು ಸಮಯ ನೀಡಿ ಮುಂದೂಡಲಾಯಿತು.**

*(ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)*

ಓದಿ ಹೇಳಿ ಕೇಳಿ ಸರಿ ಇದೆ ಎಂದು ಒಪ್ಪಿರುತ್ತಾರೆ.

*(ರಾಘವೇಂದ್ರ. ಡಿ.)*
ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು,
ಭದ್ರಾವತಿ